## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1024 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್.ಕೆ |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (BDA) ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಜಿದಾರರಿಗೆ ನಿವೇಶನ (Sites) ಮತ್ತು ಫ್ಲಾಟ್‌ಗಳ (Aprartments) ಹಂಚಿಕೆಯಲ್ಲಿ ನೀಡುತ್ತಿರುವ ರಿಯಾಯಿತಿ ಎಷ್ಟು: (ದರ ಮತ್ತು ಮೀಸಲಾತಿ ಪ್ರಮಾಣದ ವಿವರ ನೀಡುವುದು) | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (BDA) ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.3ರಷ್ಟು ಒಟ್ಟು ಶೇ.18ರಷ್ಟನ್ನು ಅರ್ಜಿದಾರರಿಗೆ ನಿವೇಶನ (Sites) ಹಂಚಿಕೆಯಲ್ಲಿ ಮೀಸಲಾತಿಯನ್ನು ನೀಡಲಾಗಿದ್ದು, ದರದಲ್ಲಿ ಯಾವುದೇ ರಿಯಾಯಿತಿ ನೀಡುತ್ತಿರುವುದಿಲ್ಲ.<br>• ಫ್ಲಾಟಿನ ಮೌಲ್ಯದಲ್ಲಿ ಸಾಮಾನ್ಯ ವರ್ಗದವರಿಗೆ ಶೇ. 12.5ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಫ್ಲಾಟಿನ ಮೌಲ್ಯದಲ್ಲಿ ಶೇ. 5ರಷ್ಟು ಪ್ರಾರಂಭಿಕ ಠೇವಣಿ ಮೊತ್ತವನ್ನು ಪಡೆಯಲಾಗುತ್ತಿದೆ.<br>• ಬೆಂಗಳೂರು ಅಭಿವೃದ್ಧಿ ಪಾಧಿಕಾರದಿಂದ ಹಂಚಿಕೆ ಮಾಡಲಾಗುವ ಫ್ಲಾಟ್‌ಗಳ ಮೌಲ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಜಿದಾರರಿಗೆ ಯಾವುದೇ ರಿಯಾಯಿತಿ ನೀಡಲಾಗುತ್ತಿರುವುದಿಲ್ಲ. |
| (ಆ) | ಬಿ.ಡಿ.ಎ ಸ್ಥಾಪನೆಯಾದಾಗಿನಿಂದ ಈವರೆಗೆ ಎಷ್ಟು ಬಡಾವಣೆಗಳನ್ನು ನಿರ್ಮಿಸಲಾಗಿದೆ ಮತ್ತು ಈ ಪೈಕಿ ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ಹಂಚಿಕೆಯಾದ ಒಟ್ಟು ನಿವೇಶನ ಹಾಗೂ ಮನೆಗಳ ಸಂಖ್ಯೆ ಎಷ್ಟು; (ಬಡಾವಣೆವಾರು ಮಾಹಿತಿ ನೀಡುವುದು) | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಈ ವರೆಗೆ ನಿರ್ಮಿಸಲಾಗಿರುವ ವಸತಿ ಯೋಜನೆಗಳ ಪಟ್ಟಿಯನ್ನು **(ಅನುಬಂಧ-1)** ರಲ್ಲಿ ನೀಡಲಾಗಿದೆ.<br>• ಬಿಡಿಎ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೂ ನಿರ್ಮಿಸಿರುವ ಎಲ್ಲಾ ಬಡಾವಣೆಗಳಲ್ಲಿಯೂ ಎಸ್.ಸಿ/ ಎಸ್.ಟಿ ಫಲಾನುಭವಿಗಳಿಗೆ ಶೇ.18ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |

| | | |
|---|---|---|
| | | • ಫ್ಲಾಟ್‌ಗಳ ಹಂಚಿಕೆಯನ್ನು ವರ್ಗವಾರು ಹಂಚಿಕೆ ಮಾಡಲಾಗುವುದಿಲ್ಲ. ಲಭ್ಯವಿರುವ ಫ್ಲಾಟ್ ಗಳಿಗೆ ನಿಗದಿತ ಪ್ರಾರಂಭಿಕ ಠೇವಣಿಯನ್ನು ಪಾವತಿಸಿದವರಿಗೆ ಫ್ಲಾಟ್ ಗಳನ್ನು ಹಂಚಿಕೆ ಮಾಡಲಾಗುವುದು. |
| (ಇ) | ಪ್ರಸ್ತುತ ಬೆಂಗಳೂರಿನ ಯಾವ ಯಾವ ಭಾಗಗಳಲ್ಲಿ ಬಿ.ಡಿ.ಎ ವತಿಯಿಂದ ಹೊಸ ಬಡಾವಣೆ ಅಥವಾ ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ: ಈ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ/ವರ್ಗದವರಿಗೆ ಕಾಯ್ದಿರಿಸಲಾದ ನಿವೇಶನ/ಮನೆಗಳ ಸಂಖ್ಯೆ ಎಷ್ಟು: | ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸುತ್ತಿರುವ ಹೊಸ ವಸತಿ ಯೋಜನೆಗಳ ಪಟ್ಟಿಯನ್ನು **(ಅನುಬಂಧ-2)**ರಲ್ಲಿ ನೀಡಲಾಗಿದೆ. ಸದರಿ ವಸತಿ ಯೋಜನೆಗಳು ಇನ್ನೂ ನಿರ್ಮಾಣ ಹಂತದಲ್ಲಿದ್ದು, ಪರಿಶಿಷ್ಟ ಜಾತಿ/ವರ್ಗದವರಿಗೆ ಯಾವುದೇ ನಿವೇಶನ/ ಫ್ಲಾಟ್ ಗಳನ್ನು ಕಾಯ್ದಿರಿಸಿರುವುದಿಲ್ಲ. |
| (ಈ) | ನಿಯಮಾನುಸಾರ ನೀಡಬೇಕಾದ ರಿಯಾಯಿತಿ ದರಗಳನ್ನು ಕೆಲವು ಯೋಜನೆಗಳಲ್ಲಿ ನೀಡದಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ರಿಯಾಯಿತಿ ನೀಡದಿರಲು ಕಾರಣಗಳೇನು ಮತ್ತು ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ/ಫ್ಲಾಟ್ ಹಂಚಿಕೆಯಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. |

**ಸಂಖ್ಯೆ: ನಅಇ 68 ಬೆಂಭೂಸ್ವಾ 2026**

**(ಡಿ ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿ**

# ಪೂರ್ಣಗೊಂಡ ಗೃಹ ನಿರ್ಮಾಣ ಯೋಜನೆಗಳ ವಿವರ
## (ಅನುಬಂಧ – 1)

| ಕ್ರಮ ಸಂಖ್ಯೆ | ಯೋಜನೆಗಳು |
|---|---|
| 1 | ದೊಡ್ಡಬನಹಳ್ಳಿ ಹಂತ – 1 |
| 2 | ದೊಡ್ಡಬನಹಳ್ಳಿ ಹಂತ – 2 |
| 3 | ಕೊತ್ತನೂರು |
| 4 | ತಿಪ್ಪಸಂದ್ರ |
| 5 | ಹಲಗೇ ವಡೇರಹಳ್ಳಿ |
| 6 | ನಂದಿನಿ |
| 7 | ಕೋನದಾಸಪುರ ಹಂತ – 2 |
| 8 | ಗುಂಜೂರು ಹಂತ – 1 |
| 9 | ಗುಂಜೂರು ಹಂತ – 2 |
| 10 | ಕಣಿಮಿಣಿಕೆ ಹಂತ – 2 |
| 11 | ಕಣಿಮಿಣಿಕೆ ಹಂತ– 3 |
| 12 | ಕಣಿಮಿಣಿಕೆ ಹಂತ– 4 |
| 13 | ಕಣಿಮಿಣಿಕೆ ಹಂತ– 5 |
| 14 | ಕೊಮ್ಮಘಟ್ಟ ಹಂತ – 1 |
| 15 | ಕೊಮ್ಮಘಟ್ಟ ಹಂತ – 2 |
| 16 | ಮಾಳಗಾಳ ಹಂತ – 1 |
| 17 | ಮಾಳಗಾಳ ಹಂತ – 2 |
| 18 | ನಾಗರಭಾವಿ |
| 19 | ವಳಗೇರಹಳ್ಳಿ ಹಂತ – 1 |
| 20 | ವಳಗೇರಹಳ್ಳಿ ಹಂತ – 2 |
| 21 | ವಳಗೇರಹಳ್ಳಿ ಹಂತ – 3 |
| 22 | ವಳಗೇರಹಳ್ಳಿ ಹಂತ – 4 |
| 23 | ವಳಗೇರಹಳ್ಳಿ ಹಂತ – 5 |
| 24 | ವಳಗೇರಹಳ್ಳಿ ಹಂತ – 6 |
| 25 | ಕೊಮ್ಮಘಟ್ಟ (NPKL) ಹಂತ – 1 |
| 26 | ಕೊಮ್ಮಘಟ್ಟ (NPKL) ಹಂತ – 2 |
| 27 | ಕೊಮ್ಮಘಟ್ಟ (NPKL) ಹಂತ – 3 |
| 28 | ಆಲೂರು ಹಂತ – 1 |
| 29 | ಆಲೂರು ಹಂತ – 2 |
| 30 | ಹುಣ್ಣಿಗೇರೆ |

ಅಭಿಯಂತರ ಅಧಿಕಾರಿ-2

# ಪ್ರಗತಿಯಲ್ಲಿರುವ ಗೃಹ ನಿರ್ಮಾಣ ಯೋಜನೆಗಳ ವಿವರ (ಅನುಬಂಧ – 2)

| ಕ್ರಮ ಸಂಖ್ಯೆ | ಯೋಜನೆಗಳು |
| --- | --- |
| 1 | ಕೋನದಾಸಪುರ ಹಂತ – 1 |
| 2 | ಕೋನದಾಸಪುರ ಹಂತ – 3 |
| 3 | ವಳಗೇರಹಳ್ಳಿ, ಹಂತ – 7 |
| 4 | ಕೆಂಚನಪುರ |
| 5 | ಕಾಳತಮ್ಮನ ಹಳ್ಳಿ |
| 6 | ದೊಡ್ಡತೋಗುರು |

ಅಭಿಯಂತರ ಅಧಿಕಾರಿ-2